1. ಪ್ರಶ್ನೋತ್ತರ

(ಅ) ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮೈಸೂರು ನಗರವನ್ನು ಗುಡಿಸಲು ಮುಕ್ತಗೊಳಿಸುವುದು.

17 (60) ಶ್ರಿ ಶಂಕರಲಿಂಗೇಗೌಡ. ಹೆಚ್.ಎಸ್ (ಚಾಮರಾಜನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿನ ಘೋಷಿತ ಕೊಳಚೆ ಪ್ರದೇಶಗಳು ಹಾಗೂ ಅಘೋಷಿತ ಕೊಳಚೆ ಪ್ರದೇಶಗಳೆಷ್ಟು;

ಆ) ಮೈಸೂರು ನಗರದಲ್ಲಿ ಯಾವ ಬಡಾವಣೆ, ಸ್ಥಳ, ಕೊಳಚೆ ಪ್ರದೇಶಗಳಲ್ಲಿ ಎಷ್ಟೆಷ್ಟು ಗುಡಿಸಲುಗಳಿವೆ;

ಇ) ಗುಡಿಸಲು ವಾಸಿಗಳ ವಿವರ ಸಂಗ್ರಹಿಸಲಾಗಿದೆಯೇ; ಹಾಗಿದ್ದಲ್ಲಿ ಅವರುಗಳಿಗೆ ಸೂರು ಕಲ್ಪಿಸಿ ಮೈಸೂರು ನಗರವನ್ನು ಗುಡಿಸಲು ಮುಕ್ತವಾಗಿರುವ ಬಗ್ಗೆ ಸರ್ಕಾರ ಇದುವರೆವಿಗೆ ಹಾಗೂ ಮುಂದೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಮೈಸೂರು ನಗರದಲ್ಲಿ 62 ಘೋಷಿತ ಹಾಗೂ 19 ಅಘೋಷಿತ ಕೊಳಚೆ ಪ್ರದೇಶಗಳಿವೆ. (ಅನುಬಂಧ "A")

ಆ) ಗುಡಿಸಲುಗಳಿರುವ ಬಡಾವಣೆ/ಕೊಳಚೆ ಪ್ರದೇಶಗಳ ವಿವರ (ಅನುಬಂಧ "B") ನಲ್ಲಿ ಒದಗಿಸಲಾಗಿದೆ.

ಇ) ಹೌದು. ಜೆಎನ್ಎನ್ಯುಆರ್ಎಮ್ – ಬಿಎಸ್ಯುಪಿ ಯೋಜನೆಯಡಿಯಲ್ಲಿ ಹಂತ–1 ರಿಂದ ಹಂತ–3ರವರೆಗೆ ಮಂಜೂರಾಗಿರುವ 6328 ಮನೆಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. (ವಿವರಗಳನ್ನು ಅನುಬಂಧ "C" ನಲ್ಲಿ ಒದಗಿಸಲಾಗಿದೆ)

ಅನುಬಂಧ – 'ಎ'

ಮೈಸೂರು ಕೊಳಚೆ ಪ್ರದೇಶಗಳ ವಿವರಗಳು

ಕ್ರ ಸಂ.	ವಿಧಾನಸಭಾ ಕ್ಷೇತ್ರ / ಪಟ್ಟಣ	ಒಟ್ಟು ಕೊಳಚೆ ಪ್ರದೇಶಗಳು		ಕುಟುಂಬಗಳ ಸಂಖ್ಯೆ		ಘೋಷಿತ ಕೊ.ಪ್ರದ ಜನಸಂಖ್ಯೆ		ಒಟ್ಟು ಜನಸಂಖ್ಯೆ		ಘೋಷಿತ ಕೊಳಚೆ ಪ್ರದೇಶದ ಜಾತಿ ವಿವರ		
		ಘೋಷಿತ	ಅಘೋಷಿತ	ಘೋಷಿತ	ಅಘೋಷಿತ	ಹೆಣ್ಣು	ಗಂಡು	ಘೋಷಿತ	ಅಘೋಷಿತ	ಪ.ಜಾ.	ಪ.ಪಂ.	ಇತರೆ
1	ನರಸಿಂಹರಾಜ ಕ್ಷೇತ್ರ	25	10	3595	586	9525	9796	19321	3131	15312	709	6431
2	ಚಾಮರಾಜ ಕ್ಷೇತ್ರ	20	5	2602	544	6939	7041	13980	2856	8387	2660	5789
3	ಕೃಷ್ಣರಾಜ ಕ್ಷೇತ್ರ	13	1	2103	40	5604	5706	11310	215	7565	993	2967
4	ಚಾಮುಂಡೇಶ್ವರಿ ಕ್ಷೇತ್ರ	4	3	612	561	1647	1673	3320	1140	2737	508	1215
	ಮೈಸೂರು ನಗರ ಒಟ್ಟು	**62**	**19**	**8912**	**1731**	**23715**	**24216**	**47931**	**7342**	**34001**	**4870**	**16402**

07th JUNE 2011

ಕ್ರ ಸಂ.	ಕೊಳಚೆ ಪ್ರದೇಶದ ಹೆಸರು	ಮಾಲೀಕತ್ವ	ವಿಸ್ತೀರ್ಣ ಎ – ಗುಂ	ಅಧಿಸೂಚನೆ ದಿನಾಂಕ	ಘೋಷಣೆ ಹುತ	ಕುಟುಂಬಗಳ ಸಂಖ್ಯೆ	ಜನಸಂಖ್ಯೆ					
							ಹೆಣ್ಣು	ಗಂಡು	ಒಟ್ಟು	ಪ.ಜಾ.	ಪ.ಪಂ.	ಇತರೆ
1	2	3	4	5	6	7	8	9	10	11	12	13
MYSORE DISTRICT – MYSORE CITY – (1) NR Constituency												
1	ಕ್ಯಾತಮಾರನಹಳ್ಳಿ ಎ ಕೆ ಕಾಲೋನಿ	ಎಂ ಸಿ ಸಿ	3ಎ 10 ಗುಂಟೆ	22-01-75	3ನೇ ಅಂತಿಮ	165	410	415	825	825	–	–
2	ಬುಡಬುಡಕೇರಿ, ಪುಲಿಕೇಶಿ ರಸ್ತೆ	ಎಂ ಸಿ ಸಿ	4ಎ 10 ಗುಂಟೆ	22-01-75	3ನೇ ಅಂತಿಮ	336	872	885	1757	1757	–	–
3	ಚಾಮುಂಡೇಶ್ವರಿ ರಸ್ತೆ, ಗಾಂಧಿನಗರ	ಎಂ ಸಿ ಸಿ	8 ಎಕರೆ	4/28/1989	11ನೇ ಅಂತಿಮ	248	636	662	1298	1292	–	6
4	ಜ್ಯೋತಿನಗರ	ಎಂ ಸಿ ಸಿ	1ಎ 09 ಗುಂ	18-12-56	11ನೇ ಅಂತಿಮ	192	512	544	1056	998	–	58
5	ಸಿದ್ಧಪ್ಪಾಜಿ ಕ್ರಾಸ್‌ರಸ್ತೆ, 1,2,3ನೇ ಕ್ರಾಸ್	ಎಂ ಸಿ ಸಿ	8ಎ 35 ಗುಂ	3/15/2001	11ನೇ ಅಂತಿಮ	185	513	523	1036	1036	–	–
6	ದುರ್ಗಾಂಬ ದೇವಸ್ಥಾನದ ಹಿಂಭಾಗ	ಎಂ ಸಿ ಸಿ	12 ಗುಂ	2/5/1986	3ನೇ ಪ್ರೀ	151	374	381	755	755	–	–
7	ರಾಜಾ ಸೋಪ್ ಫ್ಯಾಕ್ಟರಿ	ಮೂಡಾ	34 ಗುಂ	9/1/1987	11ನೇ ಪ್ರೀ	293	813	828	1641	240	38	1363
8	ಕ್ಯಾತಮಾರನಹಳ್ಳಿ ಮಸೀದಿ ರಸ್ತೆ	ಖಾಸಗಿ	1ಎ 20 ಗುಂ	22-1-75	3ನೇ ಅಂತಿಮ	120	298	302	600	–	–	600
9	ಕೆಸರೆ ಹತ್ತಿರ ಸ್ಲಾಟರ್ ಹೌಸ್	ಎಂ ಸಿ ಸಿ	2ಎ 10 ಗುಂ	25-12-07	3ನೇ ಅಂತಿಮ	306	740	772	1512	926	284	302
10	ಕೆ.ಎಸ್.ಆರ್.ಟಿ.ಸಿ. ಹಿಂದೆ	ಎಂ ಸಿ ಸಿ	1ಎ 28 ಗುಂ	26-12-97	3ನೇ ಅಂತಿಮ	165	438	454	892	890	2	–
11	ಬುಡಬುಡಕೇರಿ, ಚಕ್ಕವೀರಣ್ಣ ರಸ್ತೆ	ಎಂ ಸಿ ಸಿ	14 ಗುಂ	2/5/1996	3ನೇ ಅಂತಿಮ	104	255	265	520	520	–	–

ಕ್ರ ಸಂ.	ಕೊಳಚೆ ಪ್ರದೇಶದ ಹೆಸರು	ಮಾಲೀಕತ್ವ	ವಿಸ್ತೀರ್ಣ ಎ – ಗುಂ	ಅಧಿಸೂಚನೆ ದಿನಾಂಕ	ಘೋಷಣೆ ಹಂತ	ಕುಟುಂಬಗಳ ಸಂಖ್ಯೆ	ಜನಸಂಖ್ಯೆ					
							ಹೆಣ್ಣು	ಗಂಡು	ಒಟ್ಟು	ಪ.ಜಾ.	ಪ.ಪಂ.	ಇತರೆ
1	2	3	4	5	6	7	8	9	10	11	12	13
MYSORE DISTRICT – MYSORE CITY – (1) NR Constituency												
1	ಕ್ಯಾತಮಾರನಹಳ್ಳಿ ಎ ಕೆ ಕಾಲೋನಿ	ಎಂ ಸಿ ಸಿ	3ಎ 10 ಗುಂಟೆ	22-01-75	3ನೇ ಅಂತಿಮ	165	410	415	825	825	–	–
2	ಬುಡಬುಡಕೇರಿ, ಪುಲಿಕೇಶಿ ರಸ್ತೆ	ಎಂ ಸಿ ಸಿ	4ಎ 10 ಗುಂಟೆ	22-01-75	3ನೇ ಅಂತಿಮ	336	872	885	1757	1757	–	–
3	ಚಾಮುಂಡೇಶ್ವರಿ ರಸ್ತೆ, ಗಾಂಧಿನಗರ	ಎಂ ಸಿ ಸಿ	8 ಎಕರೆ	4/28/1989	11ನೇ ಅಂತಿಮ	248	636	662	1298	1292	–	6
4	ಜ್ಯೋತಿನಗರ	ಎಂ ಸಿ ಸಿ	1ಎ 09 ಗುಂ	18-12-56	11ನೇ ಅಂತಿಮ	192	512	544	1056	998	–	58
5	ಸಿದ್ಧಪ್ಪಾಜಿ ಕ್ರಾಸ್‌ರಸ್ತೆ, 1,2,3ನೇ ಕ್ರಾಸ್	ಎಂ ಸಿ ಸಿ	8ಎ 35 ಗುಂ	3/15/2001	11ನೇ ಅಂತಿಮ	185	513	523	1036	1036	–	–
6	ದುರ್ಗಾಂಬ ದೇವಸ್ಥಾನದ ಹಿಂಭಾಗ	ಎಂ ಸಿ ಸಿ	12 ಗುಂ	2/5/1986	3ನೇ ಪ್ರೀ	151	374	381	755	755	–	–
7	ರಾಜಾ ಸೋಪ್ ಫ್ಯಾಕ್ಟರಿ	ಮೂಡಾ	34 ಗುಂ	9/1/1987	11ನೇ ಪ್ರೀ	293	813	828	1641	240	38	1363
8	ಕ್ಯಾತಮಾರನಹಳ್ಳಿ ಮಸೀದಿ ರಸ್ತೆ	ಖಾಸಗಿ	1ಎ 20 ಗುಂ	22-1-75	3ನೇ ಅಂತಿಮ	120	298	302	600	–	–	600
9	ಕೆಸರೆ ಹತ್ತಿರ ಸ್ಲಾಟರ್ ಹೌಸ್	ಎಂ ಸಿ ಸಿ	2ಎ 10 ಗುಂ	25-12-07	3ನೇ ಅಂತಿಮ	306	740	772	1512	926	284	302
10	ಕೆ.ಎಸ್.ಆರ್.ಟಿ.ಸಿ. ಹಿಂಬೆ	ಎಂ ಸಿ ಸಿ	1ಎ 28 ಗುಂ	26-12-97	3ನೇ ಅಂತಿಮ	165	438	454	892	890	2	–
11	ಬುಡಬುಡಕೇರಿ, ಚಕ್ಕವೀರಣ್ಣ ರಸ್ತೆ	ಎಂ ಸಿ ಸಿ	14 ಗುಂ	2/5/1996	3ನೇ ಅಂತಿಮ	104	255	265	520	520	–	–

12	ಚಾಮುಂಡೇಶ್ವರಿ ರಸ್ತೆ, ಗಾಂಧಿನಗರ 2ನೇ ಹಂತ	ಎಂ ಸಿ ಸಿ	1ಎ 4 ಗುಂ	12/3/2001	3ನೇ ಅಂತಿಮ	250	685	715	1400	1400	–	–
13	ಕೆಸರೆ ಉಸ್ಮಾನಿಯಾ ಬ್ಲಾಕ್	ಎಂ ಸಿ ಸಿ	1ಎ 24 ಗುಂ	9/2/2003	3ನೇ ಪ್ರೀ	132	359	367	726	8	4	714
14	ಸವಿತ ಅಂಬೇಡ್ಕರ್ ಕಾಲೋನಿ	ಸರ್ಕಾರಿ	1ಎ 03 ಗುಂ	6/28/2003	3ನೇ ಪ್ರೀ	45	125	127	252	85	65	102
15	ದೊಡ್ಡಕೆರೆ ಮೈದಾನ	ಎಂ ಸಿ ಸಿ	1 ಎಕರೆ	22-01-1975	3ನೇ ಅಂತಿಮ	55	135	140	275	275	–	–
16	ಹನುಮಂತನಗರ	ಮೂಡಾ	0-1 ಗುಂ	30-03-2007	11ನೇ ಅಂತಿಮ	36	99	103	202	80	60	62
17	ಎಲ್ಲಮ್ಮ ಸ್ಲಂ	ಮೂಡಾ	24 ಗುಂ	30-03-07	11ನೇ ಅಂತಿಮ	85	235	241	476	460	10	6
18	ಕೆಸರೆ ಸೋನಿಯಾಗಾಂಧಿ ಬಡಾವಣೆ	ಮೂಡಾ	14 ಗುಂ	30-03-07	11ನೇ ಅಂತಿಮ	150	390	395	785	685	10	90
19	ಸಿದ್ಧಪ್ಪಾಜಿ ಕ್ರಾಸ್ ಬ್ಲಾಕ್ – ಎ	ಎಂ ಸಿ ಸಿ	16ಎ 04 ಗುಂ	4/28/1989	11ನೇ ಅಂತಿಮ	275	791	804	1595	1595	–	–
20	ಶಿವರಾತ್ರೇಶ್ವರನಗರ ಬನ್ನಿಮಂಟಪ	ಎಂ ಸಿ ಸಿ	0-30	30-03-07	11ನೇ ಅಂತಿಮ	68	189	192	381	160	68	153
21	ರಾಜಾ ಸೋಪ್ ಫ್ಯಾಕ್ಟರಿ 2ನೇ ಹಂತ	ಖಾಸಗಿ	0-03	30-03-07	11ನೇ ಅಂತಿಮ	15	42	43	85	30	5	50
22	ಕೆಸರೆ, 3ನೇ ಹಂತ	ಮೂಡಾ	1ಎ 15 ಗುಂ	30-03-07	11ನೇ ಅಂತಿಮ	18	52	56	108	–	–	108
23	ಕೆಸರೆ, 2ನೇ ಹಂತ 8ನೇ ಅಡ್ಡ ರಸ್ತೆ	ಮೂಡಾ	0-13	30-03-07	11ನೇ ಅಂತಿಮ	45	123	128	251	20	–	231
24	ವಂದೇಮಾತರಂ	ಸರ್ಕಾರಿ / ಖಾಸಗಿ	0-26	30-03-07	11ನೇ ಅಂತಿಮ	90	251	259	510	160	50	300
25	ಗೌಸಿಯಾನಗರ ಸಿ ಬ್ಲಾಕ್	ಸರ್ಕಾರಿ / ಖರಾಬು	2ಎ 09 ಗುಂ	3/27/2007	3ನೇ ಪ್ರಾರಂಭಿಕ	66	188	195	383	–	–	383
	NR Constituency Total					3595	9525	9796	19321	14197	596	4528

1	2	3	4	5	6	7	8	9	10	11	12	13
(2) Chamaraja Constituency												
26	ಮೇದರ್ಸ್ ಬ್ಲಾಕ್	ಖಾಸಗಿ	11ಎ 07 ಗುಂ	8/12/1976	3ನೇ ಅಂತಿಮ	464	1274	1284	2558	1045	268	1245
27	ಬಂಬೂಬಜಾರ್	ಎಂ ಸಿ ಸಿ	0-34	27/3/80	3ನೇ ಅಂತಿಮ	89	220	225	445	215	65	165
28	ಗೋವಿಂದರಾವ್ ಮೆಮೋರಿಯಲ್ ಹಾಲ್	ಎಂ.ಸಿ.ಸಿ	0-34	14/7/87	11ನೇ ಅಂತಿಮ	127	334	339	673	85	44	544
29	ರೀಜನಲ್ ಕಾಲೇಜ್ ಹಿಂಭಾಗ	ಖಾಸಗಿ	0-39	13/4/88	11ನೇ ಅಂತಿಮ	68	182	183	365	260	20	85
30	ಯಾದವಗಿರಿ ಪರಮಹಂಸ ರಸ್ತೆ	ಖಾಸಗಿ	0-15	1/13/1987	11ನೇ ಅಂತಿಮ	64	178	182	360	–	360	–
31	ಜನತಾ ಸಾ ಮಿಲ್ ಹಿಂದೆ	ಎಂ ಸಿ ಸಿ	0-24	2/5/1996	3ನೇ ಅಂತಿಮ	73	180	185	365	60	90	215
32	ಕಾಫಿಬೋರ್ಡ್ ಹಿಂಭಾಗ	ಮೈ ವಿ ವಿ	2ಎ 04ಗುಂ	19/7/01	3ನೇ ಅಂತಿಮ	188	490	498	988	988	–	–
33	ಮಂಜುನಾಥಪುರ	ಎಂ ಸಿ ಸಿ	2 ಎಕರೆ	5/2/1996	3ನೇ ಅಂತಿಮ	345	910	925	1835	655	547	633
34	ಆರ್.ಎಂ.ಸಿ. ಯಾರ್ಡ್	ಕೆ ಎಸ್. ಸಿ. ಬಿ	0-29	11/19/2003	17ನೇ ಅಂತಿಮ	184	485	490	975	450	30	495
35	ಪಿ.ಕೆ ಸ್ಯಾನಿಟೋರಿಯಂ ಹಿಂಭಾಗ	ಎಂ ಸಿ ಸಿ	1 ಎಕರೆ	8/9/2001	3ನೇ ಅಂತಿಮ	122	328	332	660	510	40	110
36	ಮೈಸೂರು ಸಾ ಮಿಲ್ ಮುಂಭಾಗ	ಎಂ ಸಿ ಸಿ	0-30	3/3/32000	3ನೇ ಅಂತಿಮ	157	436	443	879	460	180	239
37	ಯಶವಂತನಗರ	ಎಂ ಸಿ ಸಿ	2ಎ 10 ಗುಂ	13/12/87	3ನೇ ಅಂತಿಮ	64	171	174	345	95	160	90

38	ವಾಣಿವಿಲಾಸ ಮೊಹಲ್ಲಾ 16ನೇ ಕ್ರಾಸ್	ನಗರ ಪಾಲಿಕೆ	2ಎ 10 ಗುಂ	3/7/2000	3ನೇ ಅಂತಿಮ	192	517	521	1038	908	60	70
39	ಸ್ವೀಚ್ ಅಂಡ್ ಹಿಯರಿಂಗ್ ಎದುರು, ಬೋಗಾದಿ ರಸ್ತೆ	ಪಡಬ್ಲ್ಯೂಡಿ	0-14	3/7/2000	3ನೇ ಅಂತಿಮ	80	210	214	424	315	86	23
40	ರಾಜಾ ರಾಜೇಶ್ವರಿ ರೈಸ್ ಮಿಲ್ ಹಿಂಭಾಗ	ಎಂ ಸಿ ಸಿ	0-28	12/7/2004	3ನೇ ಅಂತಿಮ	130	338	346	684	316	214	154
41	ಜೋಗನಕೆರೆ	ನಗರ ಪಾಲಿಕೆ	0-13	2/9/2003	3ನೇ ಅಂತಿಮ	30	79	80	159	-	20	139
42	ಪಿ ಕೆ ಸ್ಯಾನಿಟೋರಿಯಂ ಹಿಂಭಾಗ, 2ನೇ ಹಂತ	ನಗರ ಪಾಲಿಕೆ	0-11	3/30/2007	3ನೇ ಅಂತಿಮ	26	68	70	138	80	42	16
43	ಗೋಕುಲಂ 3ನೇ ಹಂತ	ಮೂಡಾ	0-29	3/30/2007	3ನೇ ಅಂತಿಮ	85	223	227	450	385	30	35
44	ಮಹದೇಶ್ವರ ಬಡಾವಣೆ, ಡೋಂಗ್ರಿ ಕಾಲೋನಿ	ಸರ್ಕಾರೀ ಖರಾಬ್	0-07	3/30/2007	3ನೇ ಅಂತಿಮ	24	66	68	134	50	36	48
45	ಯಾದವಗಿರಿ (ಅರಸೀಕೆರೆ ರೈಲ್ವೆ ಹಳಿ ಪಕ್ಕ)	ಎಂ ಸಿ ಸಿ	0-36	7/19/2001	3ನೇ ಅಂತಿಮ	90	250	255	505	380	20	105
	Chamaraja Constituency Total					2602	6939	7041	13980	7257	2312	4411

1	2	3	4	5	6	7	8	9	10	11	12	13
							ಹೆಣ್ಣು	ಗಂಡು	ಒಟ್ಟು	ಪ.ಜಾ.	ಪ.ಪಂ.	ಇತರೆ
(3) K R Constituency												Page No.4
46	ನೆಲ್ಲೂರುಶೆಡ್ 2ನೇ ಹಂತ	ಎಂ ಸಿ ಸಿ	2ಎ 05 ಗುಂ	20/07/97	11ನೇ ಅಂತಿಮ	264	660	678	1338	1338	–	–
47	ವಿಶ್ವೇಶ್ವರನಗರ	ಎಂ ಸಿ ಸಿ	32 ಗುಂ	8/11/1999	11ನೇ ಅಂತಿಮ	95	251	258	509	509	–	–
48	ಸಾರ್ವಜನಿಕ ಹಾಸ್ಟೆಲ್ ಹಿಂಭಾಗ	ನಗರ ಸಭೆ	12 ಗುಂ	21/5/86	11ನೇ ಅಂತಿಮ	208	554	562	1116	1116	–	–
49	ಇಂಡಸ್ಟ್ರೀಯಲ್ ಸಬರ್ಬ್	ನಗರ ಸಭೆ	2ಎ 1 ಗುಂ	17/3/80	3ನೇ ಅಂತಿಮ	91	250	256	506	506	–	–
50	ಅಶೋಕಪುರಂ	ಎಂ ಸಿ ಸಿ	1ಎ 2 ಗುಂ	1/22/1975	3ನೇ ಅಂತಿಮ	64	169	171	340	340	–	–
51	ಅಶೋಕಪುರಂ 13ನೇ ಕ್ರಾಸ್	ಎಂ ಸಿ ಸಿ	0–21	3/12/2001	3ನೇ ಅಂತಿಮ	208	552	564	1116	1116	–	–
52	ಮಧುವನ	ಎಂ ಸಿ ಸಿ	0–30	7/19/2001	3ನೇ ಅಂತಿಮ	136	381	388	769	110	478	181
53	ಡಿ.ದೇವರಾಜ ಅರಸು ಕಾಲೋನಿ	ನಗರ ಪಾಲಿಕೆ	0–12	8/9/2007	3ನೇ ಅಂತಿಮ	142	387	393	780	780	–	–
54	ಧರ್ಮಸಿಂಗ್ ಕಾಲೋನಿ	ನಗರ ಪಾಲಿಕೆ	1ಎ 08 ಗುಂ	7/19/2001	3ನೇ ಅಂತಿಮ	110	285	290	575	575	–	–
55	ನೆಲ್ಲೂರುಶೆಡ್ ಒಂದನೇ ಹಂತ	ನಗರ ಪಾಲಿಕೆ	0–20	20/7/1997	11ನೇ ಅಂತಿಮ	60	160	162	322	322	–	–
56	ಚಂದಗಿರಿ ಕೊಪ್ಪಲ್	ಎಂ ಸಿ ಸಿ	7ಎ 20 ಗುಂ	3/7/2001	3ನೇ ಅಂತಿಮ	617	1668	1694	3362	468	380	2514
57	ಧರ್ಮಸಿಂಗ್ ಕಾಲೋನಿ ಬಿ ಬ್ಲಾಕ್	ಸರ್ಕಾರೀ	1 ಎಕರೆ	1/28/2006	11ನೇ ಅಂತಿಮ	60	160	162	322	50	60	212
58	ಸಹಕಾರ ಭವನದ ಹಿಂಭಾಗ	ಎಂ.ಸಿ.ಸಿ	0–04	5/2/1996	3ನೇ ಅಂತಿಮ	48	127	128	255	255	–	–
	K R Constituency Total					**2103**	**5604**	**5706**	**11310**	**7485**	**918**	**2907**

07th JUNE 2011

1	2	3	4	5	6	7	8	9	10	11	12	13
.							ಹೆಣ್ಣು	ಗಂಡು	ಒಟ್ಟು	ಪ.ಜಾ.	ಪ.ಪಂ.	ಇತರೆ
(4) Chamundeshwari Constituency												Page No.5
59	ನಾಚನಹಳ್ಳಿಪಾಳ್ಯ	ನಗರ ಸಭೆ	2ಎ 10 ಗುಂ	6/5/2003	3ನೇ ಅಂತಿಮ	76	201	204	405	6	–	399
60	ಮೇಟಗಳ್ಳಿ ಜನತಾ (ಅಂಬೇಡ್ಕರ್ ಕಾಲೋನಿ)	ಸರ್ಕಾರೀ	4ಎ 36ಗುಂ	2/3/2000	3ನೇ ಅಂತಿಮ	290	771	783	1554	890	325	339
61	ಹೆಬ್ಬಾಳ್ ಕಾಲೋನಿ	ಖಾಸಗಿ / ಸರ್ಕಾರೀ	0–13	6/5/2003	3ನೇ ಟ್ರೇ	31	82	84	166	166	–	–
62	ಮೇಟಗಳ್ಳಿ ಹರಿಜನ ಕಾಲೋನಿ ಮತ್ತು ಆದಿಜಾಂಬವ ಕಾಲೋನಿ	ಗ್ರಾಮಠಾಣ	3 ಎಕರೆ	30/3/07	11ನೇ ಅಂತಿಮ	215	593	602	1195	1105	–	90
	Chamundeshwari Constituency Total					**612**	**1647**	**1673**	**3320**	**2167**	**325**	**828**

ಘೋಷಣೆಯಾಗಬೇಕಾಗಿರುವುದು												
ಕ್ರ ಸಂ.	ಕೊಳಚೆ ಪ್ರದೇಶದ ಹೆಸರು	ಮಾಲೀಕತ್ವ	ವಿಸ್ತೀರ್ಣ ಎ – ಗುಂ	ಅಧಿಸೂಚನೆ ದಿನಾಂಕ	ಘೋಷಣೆ ಹಂತ	ಕುಟುಂಬಗಳ ಸಂಖ್ಯೆ	ಜನಸಂಖ್ಯೆ					
							ಹೆಣ್ಣು	ಗಂಡು	ಒಟ್ಟು	ಪ.ಜಾ.	ಪ.ಪಂ.	ಇತರೆ
1	2	3	4	5	6	7	8	9	10	11	12	13
ನರಸಿಂಹರಾಜ ಕ್ಷೇತ್ರ												Page No. 6
1	ಕೆಸರೆ. 1ನೇ ಹಂತ	ಮೂಡಾ	0–05			49	131	133	264	50	8	206
2	ಜೈಲ್ ಹಿಂಭಾಗ	ಲೋಕೋಪಯೋಗಿ	0–12			26	67	68	135	125	–	10
3	ಕೆಸರೆ ಪಾರ್ಕ್	ಮೂಡಾ	1ಎ 2 ಗುಂ			145	382	389	771	580	60	131
4	ಸೆಂಟ್ ಮೇರೀಸ್ ಶಾಲೆಯ ಹಿಂಭಾಗ	ಖಾಸಗಿ	0–10			30	82	83	165	140	25	–
5	ಹಲೀಂನಗರ	ಮೂಡಾ	0–39			108	283	287	570	–	20	550
6	ಕೆಸರೆ ಅಂಬೇಡ್ಕರ್ ನಗರ	ಮೂಡಾ	3 ಗುಂ			15	42	43	85	85	–	–
7	ಕೆಸರೆ ಬೋವಿ ಕಾಲೋನಿ	ಎಂ ಸಿ ಸಿ	4 ಗುಂ			25	67	68	135	135	–	–
8	ಕಲ್ಯಾಣಗಿರಿ ಉಸ್ತಾನಿಯಾ ಬ್ಲಾಕ್	ಮೂಡಾ	1 ಎ 3 ಗುಂ			130	346	352	698	–	–	698
9	ಗೌಸಿಯಾನಗರ ಎ ಬ್ಲಾಕ್(ಕೆರೆ)	ಸರ್ಕಾರೀ				32	83	85	168	–	–	168
10	ಫಾರಂ ಹೌಸ್ – ಗೌಸಿಯಾನಗರ	ಖಾಸಗಿ				26	69	71	140	–	–	140
	ಒಟ್ಟು					586	1552	1579	3131	1115	113	1903

07th JUNE 2011

1	2	3	4	5	6	7	8	9	10	11	12	13
					ಚಾಮರಾಜನಗರ							
11	ವೈದ್ಯಕೀಯ ಹಾಸ್ಟೆಲ್ ಹಿಂಭಾಗ	ಸರ್ಕಾರೀ				46	123	125	248	248	–	–
12	ಪಾರ್ಟ್ ಆಫ್ ಮೇಟಗಳ್ಳಿ	ಖಾಸಗಿ				171	439	435	874	320	46	508
13	ಪಾರ್ಟ್ ಆಫ್ ಕುಂಬಾರಕೊಪ್ಪಲು	ಖಾಸಗಿ				122	343	340	683	305	110	268
14	ಪಾರ್ಟ್ ಆಫ್ ಪಡುವಾರಹಳ್ಳಿ	ಖಾಸಗಿ				131	369	365	734	289	116	329
15	ಪಾರ್ಟ್ ಆಫ್ ಮಂಚೇಗೌಡನಕೊಪ್ಪಲು	ಖಾಸಗಿ				120	285	280	565	216	76	273
	ಒಟ್ಟು					544	1436	1420	2856	1130	348	1378
					ಕೃಷ್ಣರಾಜ ಕ್ಷೇತ್ರ							
16	ಗೋಪಿಕಾ ಗುಡಿಸಲು	ಖಾಸಗಿ	10 ಗುಂ			40	107	108	215	80	75	60
					ಚಾಮುಂಡೇಶ್ವರಿ ಕ್ಷೇತ್ರ							
17	ಚಾಮುಂಡಿ ಬೆಟ್ಟದ ಪಾದ	ಜೂ ಅಥಾರಿಟಿ	0–30			65	171	174	345	160	85	100
18	ಏಕಲವ್ಯನಗರ	ಸರ್ಕಾರಿ	8–30			354						
19	ಪಾರ್ಟ್ ಆಫ್ ಶ್ಯಾದನಹಳ್ಳಿ	ಖಾಸಗಿ				142	399	396	795	410	98	287
	ಒಟ್ಟು					561	570	570	1140	570	183	387
						1731	3665	3677	7342	2895	719	3728

ಅನುಬಂಧ – 'ಬಿ'

ಮೈಸೂರು ನಗರದಲ್ಲಿ ಕೊಳಚೆ ಪ್ರದೇಶಗಳ ಗುಡಿಸಲುಗಳ ವಿವರ

ಕ್ರ ಸಂ.	ಕೊಳಚೆ ಪ್ರದೇಶದ ಹೆಸರು	Name of the slum	Total Benefit
1	ಅಶೋಕಪುರಂ 13ನೇ ಕ್ರಾಸ್	Ashokapuram 13th Cross	241
2	ಬೃಂದಾವನ ಕಾಲೋನಿ	Brindavan colony	19
3	ಧರ್ಮಸಿಂಗ್ 'ಬಿ' ಬ್ಲಾಕ್	Dharmasing B block	53
4	ಧರ್ಮಸಿಂಗ್ 'ಎ' ಬ್ಲಾಕ್	Dharmasing A block	70
5	ಬಿ ಬಿ ಕೇರಿ (ಪುಲಕೇಶಿ ರಸ್ತೆ)	BB Keri (Pulikesi road)	195
6	ಡಿ. ದೇವರಾಜ ಅರಸ್ ಕಾಲೋನಿ	D. Devarajaarus colony	203
7	ಗೋಪಿಕಾ ಗುಡಿಸಲು	Gopika Gudisalu	20
8	ಹೆಬ್ಬಾಳ್ ಕಾಲೋನಿ	Hebbal colony	35
9	ಕೆ.ಎಸ್.ಆರ್.ಟಿ.ಸಿ ಡಿಪೋ	KSRTC Depot	74
10	ಮಂಜುನಾಥಪುರ	Manjunathapura	80
11	ಮೇದರ್ಸ್ ಬ್ಲಾಕ್ – 1	Medars block – 1	106
12	ಮೇದರ್ಸ್ ಬ್ಲಾಕ್ – 2	Medars block – 2	149
13	ರಾಜ ಸೋಪ್ ಫ್ಯಾಕ್ಟರಿ	Raja Soap Factory	73
14	ರಾಜ ರಾಜೇಶ್ವರಿ ರೈಸ್ ಮಿಲ್	Rajarajeshwari Rice mill	118
15	ಆರ್ಎಮ್ಸಿ ಯಾರ್ಡ್ "ಎ" ಬ್ಲಾಕ್	RMC yard "A" Block	156
16	ಆರ್ಎಮ್ಸಿ ಯಾರ್ಡ್ "ಬಿ" ಬ್ಲಾಕ್	RMC yard "B" Block	83
17	ಆರ್ಎಮ್ಸಿ ಯಾರ್ಡ್ "ಸಿ" ಬ್ಲಾಕ್	RMC yard "C" Block	94
18	ರೂಪಾನಗರ	Roopanagar	150
19	ಸಾರ್ವಜನಿಕ ಹಾಸ್ಟೆಲ್ ಹಿಂಭಾಗ	Behind sarvajanika Hostel	17

20	ಸವಿತ ಅಂಬೇಡ್ಕರ್ ಕಾಲೋನಿ	Savitha Ambedkar colony	33
21	ಉಸ್ಮಾನಿಯಾ ಬ್ಲಾಕ್ – ಕೆಸರೆ	Usmaniya Block Kesere	129
22	ವಿಶ್ವೇಶ್ವರ ನಗರ	Vishweswaraiah nagar	35
23	ಸೇಂಟ್ ಮೇರಿ ಸ್ಕೂಲ್	St. Mary school	21
24	ನಾಚನಹಳ್ಳಿಪಾಳ್ಯ	Nachanahalli palya	50
25	ನೆಲ್ಲೂರು ಶೆಡ್	Nelluru Shed	59
26	ಕುರುಬರಹಳ್ಳಿ	Kurubarahalli	8
27	ಮೇಟಗಳ್ಳಿ	Metagally	251
28	ಜ್ಯೋತಿನಗರ	Jyothinagara	48
29	ಬಿ ಬಿ ಕೇರಿ ಸಿ ವಿ ರಸ್ತೆ	C.V. Road	34
30	ಜೆ.ಪಿ. ನಗರ	J.P. Nagara	59
31	ಗಾಂಧಿನಗರ ಸಿದ್ದಪ್ಪಾಜಿ ರಸ್ತೆ	Siddappaji Cross, Gandhinagara	51
32	ಯಾದವಗಿರಿ	Yadavagiri	74
33	ಹಲೀಂ ನಗರ	Haleemnagar	147
34	ರಾಜ ಸೋಪ್ ಫ್ಯಾಕ್ಟರಿ	Raja Soap Factory	21
35	ಬೋವಿ ಕಾಲೋನಿ ಕೆಸರೆ	Bovi colony-Kesere	20
36	ಅಂಬೇಡ್ಕರ್ ಕಾಲೋನಿ ಕೆಸರೆ	Kesere Ambedkar colony	17
37	ಗೋಕುಲಂ 3ನೇ ಹಂತ	Gokulam 3rd Stage	124
38	ಕುದುರೆಮಾಳ	Kuduremala	13
39	ಹನುಮಂತನಗರ	Hanumanthanagar	32
40	ವಿ ವಿ ಮೊಹಲ್ಲಾ 16ನೇ ಕ್ರಾಸ್	V.V Mohalla 16th Cross	178
41	ಕೆಸರೆ ಎರಡನೇ ಹಂತ	Kesere II Stage	48
42	ಕೆಸರೆ 3ನೇ ಹಂತ	Kesere III Stage	64
43	ಕೆಸರೆ ಸೋನಿಯಾಗಾಂಧಿ ಬಡಾವಣೆ	Sonia Gandhinagara	123
44	ಅಶೋಕಪುರಂ 2ನೇ ಹಂತ	Ashoka puram 2nd Stage	75

45	ನಾಚನಹಳ್ಳಿಪಾಳ್ಯ	Nachanahalli Pally	32
46	ಶಿವರಾತ್ರೀಶ್ವರನಗರ	Shivaratreeswara nagar	98
47	ಚಾಮುಂಡೇಶ್ವರಿ ರಸ್ತೆ ಗಾಂಧಿನಗರ	Chamundeswari road Gandhinagar	43
48	ಪಿ ಕೆ ಸ್ಯಾನಿಟೋರಿಯಂ ಹಿಂಭಾಗ	Behind P.K. Sanitorium	27
49	ಡೋಂಗ್ರಿ ಕಾಲೋನಿ	Dongri Colony	32
50	ಕೆ.ಎಸ್.ಆರ್.ಟಿ.ಸಿ ಡಿಪೋ	KSRTC slum	94
51	ಗಾಂಧಿನಗರ ಸಿದ್ದಪ್ಪಾಜಿ ಕ್ರಾಸ್	Siddappaji Cross	96
52	ಕಲ್ಯಾಣಗಿರಿ ಉಸ್ಮಾನಿಯಾ ಬ್ಲಾಕ್	Kalyanagiri Usmaniya block	165
53	ಕ್ಯಾತಮಾರನಹಳ್ಳಿ	Kyathamaranahalli	48
54	ಜೋಗನಕೆರೆ	Joganakere	24
55	ಕೆಸರೆ ಪಾರ್ಕ್	Kesare park	128
56	ಕೆಸರೆ ಒಂದನೇ ಹಂತ	Kesare 1st Stage	55
57	ಗೋಪಿಕಾ ಗುಡಿಸಲು	Gopika gudisalu	85
58	ಗೌಸಿಯಾನಗರ 'ಎ' ಬ್ಲಾಕ್	Gousiyanagar "A" Block	45
59	ಚಾಮುಂಡಿ ಬೆಟ್ಟದ ಪಾದ	Chamundi Bettada Pada	59
60	ಕೆ.ಆರ್.ಎಸ್ ರಸ್ತೆ ನರ್ಸಿಂಗ್ ಕ್ವಾರ್ಟರ್ಸ್ ಹಿಂಭಾಗ	Nurse Quarters KRS Road	37
61	ಬಿ ಬಿ ಕೇರಿ(ಪುಲಿಕೇಶಿ ರಸ್ತೆ)	BB Keri, Pulikesi road	60
62	ಅಶೋಕಪುರಂ	Ashoka puram	25
63	ಜೈಲ್ ಕ್ವಾರ್ಟರ್ಸ್ ಹಿಂಭಾಗ	Behind Jail	26
64	ಮೈಸೂರು ಸಾ ಮಿಲ್ ಮುಂಭಾಗ	In front of Mysore saw mill	164
65	ಎಲ್ಲಮ್ಮ	Yallamma Slum	201
66	ವಂದೆ ಮಾತರಂ	Vandematharam	94

67	ಏಕಲವ್ಯನಗರ	Ekalavya Nagara	354
68	ಮೇಟಗಳ್ಳಿ ಎ.ಜೆ ಮತ್ತು ಎ.ಕೆ. ಕಾಲೋನಿ	AJ & AK Colony	254
69	ಸೋನಿಯಾಗಾಂಧಿನಗರ	Sonia Gandhi Nagara	123
70	ನೆಲ್ಲೂರು ಶೆಡ್	Nellur shed	73
71	ಪಾರ್ಟ್ ಆಫ್ ಶ್ಯಾದನಹಳ್ಳಿ	Part of Shyadanahalli	236
	ಒಟ್ಟು		**6328**

ಮೈಸೂರು ನಗರದಲ್ಲಿ ಜೆಎನ್ಎನ್ಯುಆರ್ಎಮ್–ಬಿಎಸ್ಯುಪಿ ಮೊದಲನೇ ಹಂತದ ಕಟ್ಟಡಗಳ ಕಾಮಗಾರಿ ಸ್ಥಳ

ಅನುಬಂಧ – 'ಸಿ'

ಕ್ರ ಸಂ.	Name of the slum	ಕಟ್ಟಡಗಳ ಕಾಮಗಾರಿ ಸ್ಥಳ	ಕಟ್ಟಲಾಗುತ್ತಿರುವ ಮನೆಗಳ ಸಂಖ್ಯೆ	ಹಂತಸ್ತು ವಿವರ
1	Maragowdanahally SY No.133 to 138	ಮಾರ ಗೌಡನಹಳ್ಳಿ ಸರ್ವೆ ನಂ.133 ರಿಂದ 138	320	G+3
2	Shivarathreeshwara nagar	ಶಿವರಾತ್ರೀಶ್ವರನಗರ	96	G+3
3	Soinagandhi Badavane	ಸೋನಿಯಾಗಾಂಧಿ ಬಡಾವಣೆ	112	G+3
4	Dongri Colony	ಡೋಂಗ್ರಿ ಕಾಲೋನಿ	32	G+3
5	Behind PK Sanitorium	ಪಿ ಕೆ ಸ್ಯಾನಿಟೋರಿಯಂ ಹಿಂಭಾಗ	24	G+2
6	V.V.Mohalla 16th Cross & 13th Cross	ವಿ ವಿ ಮೊಹಲ್ಲಾ 16ನೇ ಕ್ರಾಸ್ & 13ನೇ ಕ್ರಾಸ್	156	G+3/2
7	Devanur Sy No.133	ದೇವನೂರು ಸರ್ವೆ ನಂ.133	88	G+3
8	K M hally	ಕ್ಯಾತಮಾರನಹಳ್ಳಿ	48	G+3
9	Siddppaji Cross	ಸಿದ್ದಪ್ಪಾಜಿ ಕ್ರಾಸ್– ಗಾಂಧಿನಗರ	96	G+3

10	Kalyanagiri Usmaniya block	ಕಲ್ಯಾಣಗಿರಿ ಉಸ್ಮಾನಿಯಾ ಬ್ಲಾಕ್	144	G+3
11	Behind Jail Building	ಜೈಲ್ ಕ್ವಾರ್ಟರ್ಸ್ ಹಿಂಭಾಗ	12	G+3
12	Chamundeswari nagar	ಚಾಮುಂಡೇಶ್ವರಿ ರಸ್ತೆ ಗಾಂಧಿನಗರ	48	G+3
13	Rajeevnagara (DBT)	ರಾಜೀವ್ ನಗರ – (ಡಿಬಿಟಿ)	552	G+3
14	Behind VTU Sy Np.119 of Sathgally (DBT)	ವಿ.ಟಿ.ಯು ಹಿಂಭಾಗ– ಸಾತಗಳ್ಳಿಯ ಸರ್ವೆ ನಂ.119 (ಡಿಬಿಟಿ)	448	G+3
15	Vandematharam	ವಂದೆ ಮಾತರಂ	96	G+3
16	Slum adjacent to KSRTC Depot	ಕೆ.ಎಸ್.ಆರ್.ಟಿ.ಸಿ ಡಿಪೋ	96	G+3
17	Gokulam 3rd stage & KSRTC Depot	ಗೋಕುಲಂ 3ನೇ ಹಂತ & ಕೆ.ಎಸ್.ಆರ್.ಟಿ.ಸಿ ಡಿಪೋ	132	G+3
			2500	0

ಮೈಸೂರು ನಗರದಲ್ಲಿ ಜೆಎನ್ಎನ್ಯುಆರ್ಎಮ್––ಬಿಎಸ್ಯುಪಿ ಮೂರನೇ ಹಂತದ ಕಟ್ಟಡಗಳ ಕಾಮಗಾರಿ ಸ್ಥಳ

ಕ್ರ ಸಂ.	Name of the slum	ಕಟ್ಟಡಗಳ ಕಾಮಗಾರಿ ಸ್ಥಳ	ಕಟ್ಟಲಾಗುತ್ತಿರುವ ಮನೆಗಳ ಸಂಖ್ಯೆ	ಹಂತಸ್ತು ವಿವರ
1	Eklavyanagar	ಏಕಲವ್ಯನಗರ	1040	G+3

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ(ಚಾಮರಾಜ):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮೈಸೂರು ನಗರವನ್ನು ಗುಡಿಸಲುರಹಿತವಾಗಿ ಮಾಡುತ್ತೇವೆಂಬ ಆಶ್ವಾಸನೆ ನೀಡಿದ್ದಾರೆ. ಭಗವಂತ ಭೂಮಿ ಎಂಬ ರತ್ನಗಂಬಳಿ ಹಾಸಿ ಅದರ ಮೇಲೆ ಮನುಕುಲದ ಎಲ್ಲಾ ಪಕ್ಷಿ–ಪ್ರಾಣಿಗಳೂ ಬದುಕಬೇಕೆಂದು ಆಶೀರ್ವಾದ ಮಾಡಿದ್ದಾನೆ. ದೊಡ್ಡವರು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಆದರೆ, ಗುಡಿಸಲಿನಲ್ಲಿ ವಾಸಿಸುವ ಬಡವರ ಬವಣೆ ಬಗೆಹರಿಯದಂತಾಗಿದೆ. ನುಡಿದಂತೆ ನಡೆಯಬೇಕೆಂಬುದು ಬಸವಣ್ಣನವರ ಆಶಯ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ, "ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು, ನುಡಿಯೊಳಗೆ ನಡೆಯದಿದ್ದರೆ ಕೂಡಲ ಸಂಗಮ ಮೆಚ್ಚುವನೆ?" ಎಂದು ಹೇಳಿದ್ದಾರೆ. ಬಸವಣ್ಣನವರ ವಚನದಂತೆ ತಾತ್ವಿಕವಾಗಿಯಾದರೂ ಬದಲಾಗಬೇಕು. ಅಧಿಕಾರದಲ್ಲಿರುವ ನಾವುಗಳು ಶಾಶ್ವತವಲ್ಲ. "ಪದವಿಪೂರ್ವ ಪುಣ್ಯಂ ಆಯಿಂದಿತ್ತಂ ಕರ್ಮಂಚ". ಅಧಿಕಾರಕ್ಕೆ ಬಂದ ನಂತರ ನಾನೇನು ಮಾಡುತ್ತೇನೆ, ಏನನ್ನು ಮಾಡಿ ಬಿಟ್ಟು ಹೋಗುತ್ತೇನೆ, ಅದು ಶಾಶ್ವತವಾದುದೇ ಹೊರತು ಮನುಷ್ಯರಲ್ಲ. ಮಾನವ ನೀನು ದುರ್ಬಲನಲ್ಲ, ನಿನ್ನ ದೇಹ ಜಗನ್ಮಾತೆಯ ದೇಗುಲವೆಂದು ಹೇಳಿದ್ದಾರೆ. ಇವೆಲ್ಲವೂ ಈ ಸದನಕ್ಕೆ ಬೇಕು. ನಾವು ಸಾತ್ವಿಕತೆ, ಧಾರ್ಮಿಕತೆ ಮತ್ತು ದೈವಭಕ್ತಿ, ಇವೆಲ್ಲವನ್ನೂ ಅಳವಡಿಸಿಕೊಳ್ಳಬೇಕು.

ಶ್ರೀ ಎಸ್.ಸುರೇಶ್ ಕುಮಾರ್:– ತಾವು ಉಪ ಪ್ರಶ್ನೆಗಳನ್ನು ಕೇಳಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ನಾನು ಕೇಳುತ್ತಿರುವುದು ಮಹಾರಾಜರು ಆಳಿದ ಮೈಸೂರು ನಗರಕ್ಕೆ ತನ್ನದೇ ಆದ ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆ ಇದೆ. ಇಲ್ಲಿ ಬಡ ಜನರು ಹೆಚ್ಚಾಗಿದ್ದಾರೆ. ಮಳೆ ಬಂದಾಗ ಕೊಳಚೆ ಪ್ರದೇಶಗಳಿಗೆ ಹೋದರೆ ಮೂಗು ಮುಚ್ಚಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಇಂತಹ ಸ್ಥಿತಿಯಲ್ಲಿ ಮೈಸೂರು ನಗರವನ್ನು ಗುಡಿಸಲುರಹಿತವನ್ನಾಗಿ ಮಾಡುತ್ತೇವೆಂಬ ಮುಖ್ಯಮಂತ್ರಿಗಳ ಆಶ್ವಾಸನೆ ಕೇವಲ ಆಶ್ವಾಸನೆಯಾಗಿ ಉಳಿಯುತ್ತದೆಯೇ ಅಥವಾ ಅನುಷ್ಠಾನಕ್ಕೆ ತರುತ್ತಾರೆಯೇ ಎಂಬುದನ್ನು ಮಾನ್ಯ ವಸತಿ ಸಚಿವರು ಉತ್ತರಿಸಬೇಕೆಂದು ಕೇಳುತ್ತೇನೆ.

ಶ್ರೀ ವಿ.ಸೋಮಣ್ಣ(ವಸತಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರು ಕೇಳಿರುವಂತೆ, ಮೈಸೂರು ನಗರದಲ್ಲಿ ಒಟ್ಟು 81 ಕೊಳಚೆ ಪ್ರದೇಶಗಳಿದ್ದು, ಆ ಪೈಕಿ 62 ಪ್ರದೇಶಗಳು

ಕೊಳಚೆ ಪ್ರದೇಶಗಳೆಂದು ಈಗಾಗಲೇ ಘೋಷಿತವಾಗಿವೆ. ಸರ್ಕಾರಿ ಜಾಗದಲ್ಲಿ ಒಟ್ಟು 13 ಕೊಳಚೆ ಪ್ರದೇಶಗಳಿದ್ದು, ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 35 ಕೊಳಚೆ ಪ್ರದೇಶಗಳು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA)ದ ವ್ಯಾಪ್ತಿಯಲ್ಲಿ 7 ಕೊಳಚೆ ಪ್ರದೇಶಗಳಿವೆ. ಸರ್ಕಾರಿ ಜಾಗದಲ್ಲಿರುವ 4 ಅಘೋಷಿತ ಕೊಳಚೆ ಪ್ರದೇಶಗಳು, ನಗರ ಪಾಲಿಕೆ ವ್ಯಾಪ್ತಿಯಲ್ಲಿ 2 ಅಘೋಷಿತ ಕೊಳಚೆ ಪ್ರದೇಶಗಳು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 5 ಕೊಳಚೆ ಪ್ರದೇಶಗಳು ಮತ್ತು ಖಾಸಗಿ ಜಾಗಗಳಲ್ಲಿ 7 ಕೊಳಚೆ ಪ್ರದೇಶಗಳನ್ನು ಅಘೋಷಿತ ಕೊಳಚೆ ಪ್ರದೇಶಗಳೆಂದು ಘೋಷಿಸಲಾಗಿದೆ. ಇನ್ನೂ 8 ಜಾಗಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಬೇಕಾಗಿದೆ. ಅಲ್ಲಿ ಒಟ್ಟು 10,643 ಕುಟುಂಬಗಳಿದ್ದು, ಈ ಪೈಕಿ 3,414 ಮನೆಗಳನ್ನು ಈಗಾಗಲೇ ನಿರ್ಮಿಸಿಕೊಟ್ಟಿದ್ದು, ಆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಉಳಿದಂತೆ 6,328 ಮನೆಗಳನ್ನು ನಿರ್ಮಿಸುತ್ತಿದ್ದು, ಕೆಲವು ಹಂತಗಳಲ್ಲಿ ಶೇಕಡಾ 90ರಷ್ಟು ಕೆಲಸ ಮುಗಿದಿದ್ದು, ಇನ್ನು 2–3 ತಿಂಗಳಿನಲ್ಲಿ ಸಂಪೂರ್ಣ ಮುಗಿಯುತ್ತದೆ. ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರನ್ನು ಸ್ಥಳಕ್ಕೆ ಕರೆದುಕೊಂಡು ಹೋಗುತ್ತೇನೆ. 6,328 ಮನೆಗಳ ಪೈಕಿ 901 ಪಕ್ಕಾ ಮನೆಗಳನ್ನು ಕಟ್ಟಿಕೊಟ್ಟಿದ್ದು, ಆ ಮನೆಗಳಲ್ಲಿ ಅವರೇ ಸ್ವತಃ ವಾಸಿಸುತ್ತಿದ್ದಾರೆ. ಪಕ್ಕಾ ಮನೆಗಳು ಇಲ್ಲದೆ ಇರುವವರಿಗೂ ಕೂಡಾ 'ರಾಜೀವ್ ಆವಾಸ್' ಯೋಜನೆಯಡಿ 2011–12ನೇ ಸಾಲಿನಲ್ಲಿ ತೆಗೆದುಕೊಳ್ಳಲು ಇಚ್ಛಿಸಿದ್ದೇವೆ. ರಾಜ್ಯವನ್ನು ಗುಡಿಸಲುರಹಿತ ರಾಜ್ಯವನ್ನಾಗಿ ಮಾಡಬೇಕೆಂಬುದು ನಮ್ಮ ನಾಯಕರ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳ ಆಶಯವಾಗಿದೆ. ಈ ಕೆಲಸ ಮಾಡುವುದಕ್ಕೆ ಮೈಸೂರು ನಗರದಲ್ಲಿ 10,643 ಮನೆಗಳ ಪೈಕಿ 9465 ಮನೆಗಳನ್ನು ನಿರ್ಮಿಸಿದ್ದು, ಇನ್ನು 901 ಮನೆಗಳನ್ನು ಮಾತ್ರ ನಿರ್ಮಿಸಬೇಕಾಗಿದೆ. ಇದನ್ನೂ ನಿರ್ಮಿಸುವುದರ ಜೊತೆಯಲ್ಲಿ ಒಟ್ಟು ಕುಟುಂಬಗಳಿಗೆ ಯಾವ ರೀತಿಯಲ್ಲಿ ಮನೆಗಳನ್ನು ನಿರ್ಮಿಸಿ ಮೂಲ ಸೌಕರ್ಯಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಮುಂಬರುವ 2 ವರ್ಷಗಳಲ್ಲಿ 901 ಮನೆಗಳನ್ನು ನಿರ್ಮಿಸಿ ಮೈಸೂರು ನಗರವನ್ನು ಗುಡಿಸಲುರಹಿತ ನಗರವನ್ನಾಗಿ ಮಾಡಬೇಕೆಂಬ ಮಾನ್ಯ ಮುಖ್ಯಮಂತ್ರಿಗಳ ಆಶಯಕ್ಕೆ ಬದ್ಧರಾಗಿ ನಾವು ಈ ಕೆಲಸವನ್ನು ಮಾಡಿ ಮುಗಿಸುತ್ತೇವೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ಈಗ ನಿರ್ಮಿಸುತ್ತಿರುವ ಮನೆಗಳು ಕಳಪೆ ದರ್ಜೆಯಿಂದ ಕೂಡಿವೆ. ಮನೆಗಳ ನಿರ್ಮಾಣದಲ್ಲಿ ಇಂಜಿನಿಯರ್‌ಗಳು ತಮ್ಮ ಕೌಶಲ್ಯ ಉಪಯೋಗಿಸುತ್ತಿಲ್ಲ. ಈಗಾಗಲೇ 'ಆರಾಧನಾ', 'ಆಶ್ರಯ' ಮತ್ತು 'ಹುಡ್ಕೋ' ಯೋಜನೆಗಳಡಿ ಮನೆಗಳನ್ನು ನಿರ್ಮಿಸಿದ್ದಾರೆ. ಹುಡ್ಕೋ ಮನೆಗಳನ್ನು ಈಗ ಹುಡುಕುವಂತಾಗಿದೆ! ಮಳೆಗಾಲದಲ್ಲಿ ಮನೆಗಳ ತಾರಸಿ

ಬಿದ್ದು ಜನರು ಸತ್ತು ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಟ್ಟಿಕೊಡುವ ಮನೆಗಳು ಜನರ ಪ್ರಾಣ ತೆಗೆಯುವ ಮನೆಗಳಾಗಬಾರದು. ಅವರ ಮುಂದಿನ ಭವಿಷ್ಯಕ್ಕೆ, ಅವರ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಅವುಗಳು **'ಕಲ್ಯಾಣ ಮನೆ'**ಗಳಾಗಬೇಕೇ ಹೊರತು ಸಾವಿನ ಮನೆಗಳಾಗಬಾರದು. ಅವುಗಳೇನಾದರೂ ಸಾವಿನ ಮನೆಗಳಾದಲ್ಲಿ, ಸರ್ಕಾರ ಮತ್ತು ನಾವುಗಳೆಲ್ಲರೂ ಹೊಣೆಗಾರರಾಗಬೇಕಾಗುತ್ತದೆ. ಆ ಪಾಪದ ಹೊರೆ ನಮ್ಮ, ನಿಮ್ಮ ಮತ್ತು ಮುಖ್ಯಮಂತ್ರಿಗಳ ತಲೆ ಮೇಲೆ ಬೀಳುತ್ತದೆ. ಜ್ಞಾಪಕವಿರಲಿ, ನಮಸ್ಕಾರ.

ಶ್ರೀ ವಿ.ಸೋಮಣ್ಣ:– ಒಂದು ಮನೆಯ ನಿರ್ಮಾನಕ್ಕೆ 2,80,000 ರೂ.ಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಈ ಮನೆಯ ಅಳತೆ 3.15 ಚದರ ಅಡಿಗಳಷ್ಟು ಬರುತ್ತದೆ. ಮನೆಗಳ ನಿರ್ಮಾಣದಲ್ಲಿ ಯಾವುದೇ ರೀತಿ ಕಳಪೆ ಕಾಮಗಾರಿಗಳಾಗಿದ್ದಲ್ಲಿ, ಮಾನ್ಯ ಹಿರಿಯ ಸದಸ್ಯರು ನನಗೆ ಯಾವಾಗ ದಿನಾಂಕ ನಿಗದಿಪಡಿಸಿಕೊಡುತ್ತಾರೋ, ಆ ದಿನಾಂಕದಂದು ನಾನು ಅವರ ಜೊತೆ ಹೋಗಿ ಯಾವುದೇ ಮುಲಾಜಿಗೆ ಒಳಗಾಗದೆ ಮನೆಗಳ ನಿರ್ಮಾಣದಲ್ಲಿ ಒಂದು ಸಣ್ಣ ಅಪಚಾರವಾಗಿದ್ದರೂ ಕಾನೂನು ಕ್ರಮ ಕೈಗೊಳ್ಳಲು ಹಿಂದೆ–ಮುಂದೆ ನೋಡುವುದಿಲ್ಲ. ಇತ್ತೀಚೆಗೆ ನಾವು ಕಟ್ಟುತ್ತಿರುವ ಮನೆಗಳ ಗುಣಮಟ್ಟದ ವಿಚಾರವಾಗಿ ಹೇಳುವುದಾದರೆ, ಇದಕ್ಕೆ ತಂತ್ರಜ್ಞರ ಸಮಿತಿಯೂ ಇದೆ. ಸನ್ಮಾನ್ಯ ಹಿರಿಯ ಮಾನ್ಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರು ಹೇಳುವಂತೆ, ಮನೆಗಳ ನಿರ್ಮಾಣದಲ್ಲಿ ಕಳಪೆ ಕಾಮಗಾರಿಗಳಾಗಿದ್ದಲ್ಲಿ, ಅವರು ಯಾವತ್ತೂ ನನಗೆ ದಿನಾಂಕ ನಿಗದಿಪಡಿಸಿಕೊಡುತ್ತಾರೋ, ಅವರ ಜೊತೆ ನಾನೇ ಸ್ವತಹ ಹೋಗುತ್ತೇನೆ. ಇಬ್ಬರು ಪರಿಶೀಲನೆ ಮಾಡೋಣ. ಒಂದು ಸಣ್ಣ ಲೋಪವಿದ್ದರೂ ಸರಿಪಡಿಸುವ ಕೆಲಸ ಮಾಡುತ್ತೇನೆ.

ಅಧ್ಯಕ್ಷರು:– ಶ್ರೀ ಬಿ.ಸಿ.ಪಾಟೀಲ್ ಇವರ ಪ್ರಶ್ನೆಯು ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ.

ಸಮಗ್ರ ಅಭಿವೃದ್ಧಿ ಯೋಜನೆಯಡಿ ನಿವೇಶನಗಳ ಮಾರಾಟ

19 (173) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ):– ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;